ದಿನಾಂಕ 23-02-2024 ಅಸಲು ದಾವಾ ಸಂ.147/2022
ಪಿ.ಡಬ್ಲ್ಯೂ-1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಎಸ್. ಸಿ.ಯು ವಕೀಲರಿಂದಃ-**

ನಾನು ಮತ್ತು 1 ನೇ ಪ್ರತಿವಾದಿ ಖಾಸಾ ಸಹೋದರರು ಅಲ್ಲ ಎಂದರೆ ಸರಿ . ಅದೇ ರೀತಿ ಪ್ರತಿವಾದಿ ನಂಃ 2 ರಿಂದ 8 ಇವರು ನನ್ನ ಖಾಸಾ ಸಂಬಂಧಿಕರು ಇರುವುದಿಲ್ಲ ಎಂದರೆ ಸರಿ . ದಾವಾ ಆಸ್ತಿ ಗಳಲ್ಲಿ ಒಟ್ಟು 03 ಭಾಗ ಇದ್ದು ಅವುಗಳಲ್ಲಿ 1 ಭಾಗ ನನಗೆ ಇದ್ದು ಇನ್ನೊಂದು ಭಾಗ ಮೊದಲು ಪ್ರತಿವಾದಿ ನಂಃ 2 ರಿಂದ 8 ಇವರೆಗೆ ಒಟ್ಟಾಗಿ ಮತ್ತು ಮತ್ತೊಂದು ರಾಚಯ್ಯ ಕಡಪಟ್ಟಿ ಇವರಿಗೆ ಎಂದರೆ ಸರಿ . ನಾನು ಹಾಜರುಪಡಿಸಿದ ಕೈ ನಕಾಶೆಯನ್ನು ಹಿರಿಯರ ನೀಡಿದ ಮಾಹಿತಿ ಮೇರೆಗೆ ತಯಾರಿಸಿ ಹಾಜರುಪಡಿಸಿದ್ದೇನೆ. ಅದಕ್ಕೆ ಪೂರ್ವಕವಾಗಿ ಯಾವುದೇ ಸಿಟಿ ಸರ್ವೆ ಮ್ಯಾಪ ಆಗಲೀ, ಕಂದಾಯ ದಾಖಲೆಗಳಾಗಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕಂದಾಯ ದಾಖಲೆ ಹಾಜರುಪಡಿಸಿದ್ದೇನೆ. ನಾನು ನೀಡಿದ ಕೈ ನಕಾಶೆ ಸಿಟಿ ಸರ್ವೆ ಮ್ಯಾಪ ಪ್ರಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಿಟಿ ಸರ್ವೆ ಮ್ಯಾಪನು ಹಾಜರುಪಡಿಸಿದ್ದೇನೆ. ಸಿ.ಟಿ.ಎಸ್ ನಂ ಃ 241 ವಿಸ್ತೀರ್ಣ 67.54 ಚದರ ಅಡಿ ಆಸ್ತಿ ಮೂಲತಃ ಚನ್ನಪ್ಪ ಸಿದ್ರಾಮಪ್ಪ ಪಡಸಲಗಿ ಇವರ ಹೆಸರಿನಲ್ಲಿ ಇತ್ತು ಎಂದರೆ ಸರಿ . ಸದರಿ ಆಸ್ತಿಯ ಪಶ್ಚಿಮ ಭಾಗದ ಕ್ಷೇತ್ರವನ್ನು ಅವರು ದೇವೆಂದ್ರಪ್ಪ ಮಲಕಪ್ಪ ಸಿದ್ದಾಪುರ ಇವರಿಗೆ 1875 ರೂ. ಗಳಿಗೆ ದಿನಾಂಕ 05.05.1952 ರಂದು ಮಾರಾಟ ಮಾಡಿದರು ಎಂದರೆ ಸರಿ . ನಂತರ ಅದೇ ದಿನ ಪೂರ್ವ ಭಾಗದ ಕ್ಷೇತ್ರವನ್ನು ಚನ್ನಪ್ಪ ಇವರು ನನ್ನ ಅಜ್ಜನಾದ ಗಂಗಪ್ಪ ಮಹಾಲಿಂಗಪ್ಪ ಚಮಕೇರಿ ಇವರಿಗೆ 1875 ರೂ. ಗಳಿಗೆ ಮಾರಾಟ ಮಾಡಿದರು ಎಂದರೆ ಸರಿ . ಆಗ ಆದ ಖರೀದಿ ಪತ್ರಗಳು ನೊಂದಾಗಿರುತ್ತೇವೆ. ನಂತರ ಸದರಿ ಕ್ಷೇತ್ರಗಳನ್ನು ದೇವೇಂದ್ರಪ್ಪ ಮತ್ತು ನನ್ನ ಅಜ್ಜನಾದ ಗಂಗಪ್ಪ ಇವರು ವಾಟ್ನಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಂತರ ದೇವೇಂದ್ರಪ್ಪ ಮಲಕಪ್ಪ ಸಿದ್ದಾಪೂ ರ ಇವರ ಕುಟುಂಬದವರು 1976 ರಲ್ಲಿ ವಾಟ್ನಿ ಮಾಡಿಕೊಂಡು ಅದಕ್ಕೆ ಆಸ್ತಿ 241/ಹೆಚ್ 1 ಕ್ಷೇತ್ರ 9 ಫೂಟ್ x 49.6 ಇಂಚು ಎಂದು ವಿಭಾಗ ಆಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿ ದೇವೇಂದ್ರಪ್ಪ ಇವರ ಪಾಲಿಗೆ ಬಂದಿತ್ತು ಎಂದರೆ ಸದರಿ ವಿಷಯವನ್ನು ನನ್ನ ಅಜ್ಜ ಹೇಳಿದ್ದರು . ಸದರಿ ಪಾಲು ನಮ್ಮ ಕ್ಷೇತ್ರಕ್ಕೆ ಸಂಬಂಧಿಸಿರುವುದಿಲ್ಲ.

ನನ್ನ ಅಜ್ಜನಾದ ಗಂಗಪ್ಪ ಇವರಿಗೆ ಪೂರ್ವ ಭಾಗದ 241/ಹೆಚ್2 ಎಂದು ವಿಭಾಗ ಆಗಿರುತ್ತದೆ ಎಂದರೆ ಸರಿ. 1976 ರಿಂದ ಇಲ್ಲಿಯವರಿಗೂ ಸದರಿಯವರಿಗೆ ಬಂದ ಕ್ಷೇತ್ರದ ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿ . 1976 ರಲ್ಲಿ ಆದ ವಾಟ್ನಿ ಕುರಿತು ಅದು ಸರಿ ಇಲ್ಲ ಎಂದು ನಾವಾಗಲಿ ಅಥವಾ ನನ್ನ ಅಜ್ಜ, ತಂದೆಯಾಗಲಿ ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿ 1978 ರಲ್ಲಿ ಅದನ್ನು ಪ್ರಶ್ನಿಸಿದ್ದೇವೆ ಎಂದರೆ ಸರಿ . ಅದನ್ನು ಎಲ್ಲಿ ಪ್ರಶ್ನೆ ಮಾಡಿದ್ದೇವೆ ಎಂದು ನಿಖರವಾಗಿ ನನಗೆ ಹೇಳಲು ಬರುವುದಿಲ್ಲ ಅದರ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಜರು ಚುಕಿನಿಂದ ನನ್ನ ಅಜ್ಜನ ಹೆಸರು ಆಸ್ತಿ ಉತಾರದಲ್ಲಿ ಕಡಿಮೆಯಾಗಿದೆ ಎಂದು ಕೇಳಿ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನನ್ನ ಅಜ್ಜನಾಗಲಿ ಅಥವಾ ನನ್ನ ತಂದೆಯಾಗಲಿ ವಿಭಾಗ ಸರಿ ಇಲ್ಲ ಮತ್ತು ಕ್ಷೇತ್ರ ಹೆಚ್ಚು ಕಡಿಮೆಯಾಗಿದೆ ಎಂದು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

1983 ಇಸ್ವಿಯಲ್ಲಿ ನನ್ನ ಅಜ್ಜನಾದ ಗಂಗಪ್ಪ ಇವರು ತೀರಿಕೊಂಡರು ಎಂದರೆ ಸರಿ . ಅವರು ತೀರಿಕೊಂಡ ನಂತರ ಆಸ್ತಿ ನಂಃ 241/ಹೆಚ್ 2 ಆಸ್ತಿಗೆ ವಾರಸು ಮಾಡಿಕೊಂಡೆವು ಎಂದರೆ ಸರಿ . ನಂತರ ನನ್ನ ಅಜ್ಜನ ಮಕ್ಕಳು ಮತ್ತು ನಾವು ವಿಭಾಗ ಮಾಡಿಕೊಂಡೆವು ಎಂದರೆ ಸರಿ . 1952 ರಿಂದ 1976 ಮತ್ತು ನಂತರ 2015 ರವರೆಗೂ ಆಸ್ತಿ ವಿಸ್ತೀರ್ಣ ಉತಾರದಲ್ಲಿ ಇದ್ದಾ ಹಾಗೆ ಇತ್ತು ಎಂದರೆ ಸರಿ . 2015 ರಲ್ಲಿ ಆದ ವಿಭಾಗದಲ್ಲಿ ಅಸ್ತಿ ನಂಃ 241/ಹೆಚ್ 2 ಆಸ್ತಿ ನನ್ನ ಪಾಲಿಗೆ ಬಂದಿದ್ದು ಅದರ ಕಬ್ಜಾದಲ್ಲಿ ಇದ್ದೇನೆ ಎಂದರೆ ಸರಿ .

ದೇವೆಂದ್ರಪ್ಪ ಮಲಕಪ್ಪ ಸಿದ್ದಾಪುರ ಇವರು 1985 ರಲ್ಲಿ ತೀರಿಕೊಂಡರು ಎಂದರೆ ಸರಿ . ಆತನ ನೇರ ವಾರಸುದಾರರಾದ ಪ್ರತಿವಾದಿ ನಂಃ 2 ರಿಂದ 8 ಇವರು ಸದರಿ ಆಸ್ತಿ ನಂ 241/ಹೆಚ್ 1 ಕ್ಕೆ ತಮ್ಮ ಹೆಸರನ್ನು ವಾರಸು ಮಾಡಿಕೊಂಡರು ಎಂದರೆ ಸರಿ . ಆಗ ನಾವು ತಕರಾರು ಕೊಟ್ಟಿಲ್ಲಎಂದರೆ ಸರಿ . ನಂತರ ಸದರಿ ಪ್ರತಿವಾದಿಯರು ತಮ್ಮ ಕುಟುಂಬ ಅಡಚಣೆಗಾಗಿ ಸದರಿ ಆಸ್ತಿಯನ್ನು 1 ನೇ ಪ್ರತಿವಾದಿಗೆ ರೂ. 44,000 ಕ್ಕೆ ದಿನಾಂಕ 11.03.2016 ಕ್ಕೆ ಮಾರಾಟ ಮಾಡಿದರು ಎಂದರೆ ಸರಿ . ಖರೀದಿ ಪತ್ರದಂತೆ 1 ನೇ ಪ್ರತಿವಾದಿಯ ಹೆಸರು ಸಿಟಿಎಸ್ ಉತಾರದಲ್ಲಿ ದಾಖಲಾಯಿತು ಎಂದರೆ ಸರಿ . ನಂತರ ನಾವು ತಕರಾರು ಸಲ್ಲಿಸಿದ್ದೇವೆ. ಸದರಿ ತಕರಾರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 1 ನೇಪ್ರತಿವಾದಿ ತಾನು ಆಸ್ತಿ ಖರೀದಿಸಿದ ನಂತರದಿಂದ ಸದರಿ ಆಸ್ತಿಯ ಕ್ಷೇತ್ರದ ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅವರು ಪ್ರತಿ ವರ್ಷ ತಮ್ಮ ಆಸ್ತಿಯ ಕುರಿತಾಗಿ ಮುನ್ಸಿಪಾಲಿಟಿ ಕರ ತುಂಬುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ನೀಡಿದ್ದ ತಕಾರಾರಿನ ಕುರಿತಾಗಿ ಎಡಿಎಲ್ ಆರ್ ಇವರು ಸುದೀರ್ಘ ವಿಚಾರಣೆ ನಡೆಸಿ ದಿನಾಂಕ 01.06.2017 ರಂದು ನಮ್ಮ ತಕರಾರನ್ನು ತಳ್ಳಿ ಹಾಕಿ 1 ನೇ ಪ್ರತಿವಾದಿಯ ಹೆಸರನ್ನು ಸಿಟಿಎಸ್ ಉತಾರದಲ್ಲಿ ನಮೂದಿಸಲು ಆದೇಶ ಮಾಡಿದ್ದರೂ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಪ್ರಕರಣದಲ್ಲಿ ನಾನು ವಕೀಲರ ಮೂಲಕ ಹಾಜರಾಗಿ ಲಿಖಿತ ತಕರಾರು ಸಲ್ಲಿಸಿ ದಾಖಲೆಗಳನ್ನು ಹಾಜರುಪಡಿಸಿದ್ದೆ ಎಂದರೆ ಸರಿ . ಸದರಿ ಆದೇಶದ ವಿರುದ್ದ ನಾವು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ . ಸದರಿ ಆದೇಶದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ದಾವೆ ದಾಖಲಿಸುವ ಮೊದಲು ನಾನು ಮುಧೋಳದ ನ್ಯಾಯಾಲಯದಲಿ ಶಾಶ್ವತ ಮನಾಯಿ ಅಸಲು ದಾವಾ ನಂಃ 99/2016 ಎಂದು ಈ ಕೇಸಿನ ದಾವಾ ಆಸ್ತಿಗಳು ಮತ್ತು ಪ್ರತಿವಾದಿಯರ ಮೇಲೆ ದಾಖಲಿಸಿದೆ ಎಂದರೆ ಸರಿ . ಸದರಿ ಕೇಸು ದಿನಾಂಕ 30.08.2018 ರಂದು ವಜಾ ಆಯಿತು ಎಂದರೆ ಸರಿ . ಸದರಿ ಕೇಸು ಚಾಲ್ತಿ ಇದ್ದಾಗಲಿ ನಾನು ಕೇಸನ್ನು ದಾಖಲಿಸಿದ್ದೆ ಎಂದರೆ ಸರಿ . 1 ನೇ ಪ್ರತಿವಾದಿ ಖರೀದಿಸಿದ್ದ ಆಸ್ತಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲದೆ ಇದ್ದರೂ ಅವರಿಗೆ ತೊಂದರೆ ಕೊಡಲು ಇಂತಹ ಪ್ರಕರಣಗಳನ್ನು ದಾಖಲಿಸುತ್ತಿದ್ದೇನೆ ಎಂದರೆ ಸರಿಯಲ್ಲ. 1952 ರಿಂದ ಇಲಿಯವರೆಗೂ ದಾವಾ ಆಸ್ತಿಗಳ ಕುರಿತಾಗಿ ಸಾಕಷ್ಟು ಬದಲಾವಣೆಯಾಗಿ ಡೈರಿ ಮಂಜೂರಾಗಿದೆ ಎಂದರೆ ಸರಿ . ನನ್ನ ಅಜ್ಜನಾಗಲೀ ಅಥವಾ ನನ್ನ ತಂದೆಯಾಗಲೀ ಸದರಿ ಡೈರಿಗಳನ್ನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ . ಪ್ರತಿವಾದಿ ನಂಃ 2 ರಿಂದ 8 ಇವರಿಗೆ ಅವರ ಆಸ್ತಿಯನ್ನು ನನಗೆ ಖರೀದಿ ಕೊಡಲು ನಾನು ಒತ್ತಾಯ ಮಾಡಿದ್ದೆ ಎಂದರೆ ಸರಿಯಲ್ಲ. ಅವರೇ ನನಗೆ

ಕೊಡುತ್ತೇನೆ ಎಂದು ಹೇಳಿದ್ದರು . 1 ನೇ ಪ್ರತಿವಾದಿಗೆ ಅವರು ಆಸ್ತಿ ನೀಡಿ ನನಗೆ ನೀಡದ ಕಾರಣ ಈ ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕಾಯಿದೆ ಶಿರವಾಗಿ ಖರೀದಿ ಪತ್ರ ನೊಂದಾಯಿಸಿ ಕೊಂಡು ತಮ್ಮ ಕ್ಷೇತ್ರದ ಕಬ್ಜಾ ವಹಿವಾಟಿನಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ಅವರು ಆಸ್ತಿ ಖರೀದಿಸುವ ಮೊದಲು ಆಸ್ತಿಯ ಕುರಿತಾಗಿ ಸಾಕಷ್ಟು ವಿಚಾರಣೆ ಮಾಡಿ ದಾಖಲೆಗಳನ್ನು ಪರಿಶೀಲಿಸಿದ ನಂತರ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಕೈ ನಕ್ಷೆಗೂ, ಸಿಟಿಎಸ್ ದಾಖಲೆಗಳಿಗೂ ಮತ್ತು ಸಿಟಿಎಸ್ ಮ್ಯಾಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಖರೀದಿಸಿದ ಆಸ್ತಿಯಲ್ಲಿ ನನಗೆ ಮತ್ತು 2 ನೇ ವಾದಿಗೆ ಯಾವುದೇ ಹಕ್ಕು, ಹಿತಾಸಕ್ತಿ ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಆಸ್ತಿ ನಂಃ 241 ಕ್ಕೆ ಸಂಬಂಧಿಸಿದಂತೆ ಹಕ್ಕು ಇರುತ್ತದೆ. ನಾನು ಆಸ್ತಿ ನಂಃ 240 ಮತ್ತು 241 ಇವುಗಳ ವಿಸ್ತೀರ್ಣ ಸರಿ ಇಲ್ಲ ಎಂದು ಸಿಟಿ ಸರ್ವೆಯರಿಗೆ ಅಳತೆ ಮಾಡಲು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ . ನಾನಗಲಿ ಅಥವಾ 2 ನೇ ವಾದಿಗಾಗಲಿ 1 ನೇ ಪ್ರತಿವಾದಿ ಖರೀದಿಸಿದ ಆಸ್ತಿ ಮೇಲೆ ಯಾವುದೇ ಹಕ್ಕು ಇಲ್ಲದೆ ಇದ್ದರೂ ಪ್ರತಿವಾದಿಯರು 2 ರಿಂದ 8 ಇವರು ಆಸ್ತಿ ನಂ 241 /ಹೆಚ್ 1 ನ್ನು ನಮಗೆ ಖರೀದಿ ನೀಡದ ಕಾರಣ ಪ್ರತಿವಾದಿಯರ ಮೇಲೆ ಸುಳ್ಳು ಕೇಸು ದಾಖಲಿಸಿದ್ದೇನೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.